# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ, ಬಸವನ ಬಾಗೇವಾಡಿ.

**ಸಿ.ಸಿ.611/2016**

| | |
|---|---|
| **ಹೆಸರು** | ವಿಕಾಸ ಲಮಾಣಿ |
| **ತಂದೆಯ ಹೆಸರು** | ಪಾಂಡಪ್ಪ |
| **ವಯಸ್ಸು** | 44 ವರ್ಷ |
| **ವೃತ್ತಿ** | ಸಿ ಪಿ ಐ ಹಗರಿಬೊಮ್ಮನಹಳ್ಳಿ |
| **ವಿಳಾಸ** | ಹಗರಿಬೊಮ್ಮನಹಳ್ಳಿ |

**ಸಾಕ್ಷಿಯನ್ನು ಇಂದು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 25.07.2026.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**,

1. ನಾನು ದಿನಾಂಕಃ 22.10.2014 ರಿಂದ 13.10.2016 ರವರೆಗೆ ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪಿಎಸ್ ಐ ಅಂತ ಕರ್ತವ್ಯ ನಿರ್ವಹಿರುತ್ತೇನೆ.

2. ದಿಃ 30.03.2016 ರಂದು ಸಂಜೆ 08.30 ಗಂಟೆಗೆ ನಾನು ಠಾಣಾ ಎಸ್.ಎಚ್.ಒ ಕರ್ತವ್ಯದಲ್ಲಿದ್ದಾಗ ಚಾಸಾ-11 ರವರು ಠಾಣೆಗೆ ಹಾಜರಾಗಿ ಚಾಸಾ-1 ರವರು ನೀಡಿರುವ ಹೇಳಿಕೆಯ ದೂರನ್ನು ನನ್ನ ಮುಂದೆ ಹಾಜರುಪಡಿಸಿದ್ದು, ಸದರಿ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನೆ ನಂಬರ್ 73/2016 ರಂತೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗೆ ಕಳುಹಿಸಿರುತ್ತೇನೆ.

3. ನಾನು ದಿನಾಂಕ: 31.03.2016 ರಂದು ಬೆಳಿಗ್ಗೆ 11.00 ಗಂಟೆಯಿಂದ 12.00 ಗಂಟೆಯವರೆಗೆ ಚಾಸಾ-8 ರವರು ತೋರಿಸಿದಂತೆ ಬಸವನ ಬಾಗೇವಾಡಿ ಎನ್.ಎಚ್-50 ರಸ್ತೆಯ ಬಸವನ ಬಾಗೇವಾಡಿ ಕ್ರಾಸ್ ಹತ್ತಿರ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ

ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಮಹಜರ ಕಾಲದಲ್ಲಿ ಚಾಸಾ-8 ರವರು ಹಾಜರು ಪಡಿಸಿದ ಒಂದು ಹಿಡಿಗ್ಗೈ ಗಾತ್ರ ಕಲ್ಲು ಮತ್ತು ಒಂದು ಬಡಿಗೆ ಅಮಾನತು ಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಅಮಾನತು ಪಡಿಸಿಕೊಂಡಿರುವ ಮು.ಮಾಲುಗಳನ್ನು ಪಟ್ಟಿ ಸಂಖ್ಯೆಃ20/2016 ರಂತೆ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ. ಅದೇ ದಿನ ನಾನು ಚಾಸಾ-4 ರಿಂದ 9 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

4. ನಂತರ ನಾನು ದಿಃ 13.04.2016 ರಂದು ಚಾಸಾ-1 ರವರು ಗಾಯದ ಪ್ರಮಾಣ ಪತ್ರವನ್ನು ಚಾಸಾ-10 ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಾನು ದಿ: 20.04.2016 ರಂದು 3 ನೇ ಆರೋಪಿಯನ್ನು ದಸ್ತಗಿರಿ ಮಾಡಿ ದಸ್ತಗಿರಿ ನಿಯಮಗಳನ್ನು ಪಾಲಿಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ 1 ಮತ್ತು 2 ನೇ ಆರೋಪಿತರು ನನ್ನ ಮುಂದೆ ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ನೀರಿಕ್ಷಣಾ ಜಾಮೀನಿನ ಆದೇಶವನ್ನು ಪಡೆದು, ಸದರಿ ಆದೇಶ ಪ್ರತಿಯನ್ನು ನನ್ನ ಮುಂದೆ ಹಾಜರಾಗಿದ್ದು, ಸದರಿ ಆರೋಪಿತರನ್ನು ಮಾನ್ಯ ಜಿಲ್ಲಾ ನ್ಯಾಯಾಲಯದ ಆದೇಶದ ಪ್ರಕಾರ ಸೂಕ್ತ ಭದ್ರತೆಯನ್ನು ಪಡೆದು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ದಿಃ 23.04.2016 ರಂದು ಆರೋಪಿತರ ವಿರುದ್ಧ ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

5. ಸಾಕ್ಷಿಯು ತಾವು ಸ್ವೀಕರಿಸಿದ ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ಈಗಾಗಲೆ ನಿಪಿ- 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ನಡೆದ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು.

6. ನಾನು ಅಮಾನತು ಪಡಿಸಿಕೊಂಡಿರುವ ಒಂದು ಹಿಡಿಗೈ ಗಾತ್ರದ ಕಲ್ಲು ಮತ್ತು ಒಂದು ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಬಡಿಗೆಯನ್ನು ಮತ್ತು ಹಿಡಿಗೈ ಗಾತ್ರದ ಕಲ್ಲನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೇಮಾಲು -1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿತರ ಪರವಾಗಿ .ಎ.ಜಿ.ಎನ್ ವಕೀಲರಿಂದಃ</u>**

1. ಚಾಸಾ-1 ರವರು ನಿಪಿ-1 ರ ದೂರನ್ನು ಚಾಸಾ-11 ರವರ ಮೂಲಕ ನೀಡಿರುತ್ತಾರೆ. ಚಾಸಾ-11 ರವರು ನನ್ನ ಅಧೀನ ಅಧಿಕಾರಿಗಳು ಎಂದರೆ ಸರಿ. ಚಾಸಾ-1 ರವರು ಆರೋಪಿತರ ವಿರುದ್ದ ಸುಳ್ಳು ದೂರನ್ನು ಚಾಸಾ-11 ರವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳದ ಪಂಚನಾಮೆಯನ್ನು ಮಾಡಿಲ್ಲ ಮತ್ತು ಮು.ಮಾ 1 ಮತ್ತು 2 ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-2 ಮತ್ತು 3 ರವರ ಸಹಿಗಳನ್ನು ನಮ್ಮ ಠಾಣೆಯಲ್ಲಿಯೇ ಬಿಳಿ ಹಾಳೆಯ ಮೇಲೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ನಾನು ಈ ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

2. ಸಾಮಾನ್ಯವಾಗಿ ಮು.ಮಾ-1 ಮತ್ತು 2 ನ್ನು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಯಾವುದೇ ಆರೋಪಗಳು ನನ್ನ ತನಿಖಾವಧಿಯಲ್ಲಿ ಕಂಡು ಬರದೇ ಇದ್ದರೂ ಕೂಡ ಚಾಸಾ-1 ರವರಿಗೆ ಸಹಾಯ ಮಾಡಲು ಆರೋಪಿತರ ವಿರುದ್ದ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ ಎಂದು ನುಡಿದಿರುತ್ತಾರೆ.**

(**ತೆರೆದ ನ್ಯಾಯಾಲಯದಲ್ಲಿ** ವಿಡಿಯೋ ಕಾನ್ಪರೇನ್ಸ ಮುಖಾಂತರ ಬೆಳಿಗ್ಗೆ 11.40 ರಿಂದ 12.10 ಗಂಟೆಯವರೆಗೆ **ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ಬಸವನ ಬಾಗೇವಾಡಿ.**